# 8ನೇ ತರಗತಿ ಪ್ರಥಮ ಸಂಕಲನಾತ್ಮಕ ಪರೀಕ್ಷೆ, ಸೆಪ್ಟೆಂಬರ್–2019

ಸಮಯ : 1.30 ಗಂಟೆ | ವಿಷಯ : ಪ್ರಥಮ ಭಾಷೆ ಕನ್ನಡ | ಗರಿಷ್ಠ ಅಂಕಗಳು : 40

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. 'ಧನವಂತ' ಪದದಲ್ಲಿರುವ ಅನುನಾಸಿಕ ಅಕ್ಷರವಿದು.
   (ಎ) ಧ (ಬಿ) ನ (ಸಿ) ವ (ಡಿ) ತ
2. 'ಮನದಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು.
   (ಎ) ಪ್ರಥಮ (ಬಿ) ತೃತೀಯ (ಸಿ) ಪಂಚಮಿ (ಡಿ) ಸಪ್ತಮಿ
3. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು.
   (ಎ) ಊರೂರು (ಬಿ) ಹಾಡುತ್ತಿರುವ (ಸಿ) ಹೆಗಲುಗೊಟ್ಟು (ಡಿ) ಉದ್ಯಮವನ್ನು
4. ಮೂರು ಸಾಲಿನ ಪದ್ಯವನ್ನು ಹೀಗೆನ್ನುವರು
   (ಎ) ತ್ರಿಪದಿ (ಬಿ) ಚೌಪದಿ (ಸಿ) ಷಟ್ಪದಿ (ಡಿ) ಅಷ್ಟಷಟ್ಪದಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4x1=4**

5. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
6. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?
7. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?
8. ಮಗು ಏನನ್ನು ಲೆಕ್ಕಿಸದೆ ಹೊದಿಕೆಯನ್ನು ಒದೆಯುತಿದೆ?

**III. ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.** **4x2=8**

9. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು?
10. ಜನಪ್ರಿಯ ಹೋಟೆಲಿನ ಮಾಲೀಕನಿಗೆ ತಂಪು ಪಾನೀಯ ಕಂಪನಿ ಹೇಳಿದ್ದೇನು?
11. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಅಡಿಗರು ಉತ್ಸಾಹ–ಉದ್ವೇಗದಲ್ಲಿ ಹೇಳುವ ಮಾತುಗಳಾವುವು?
12. ಸಾರ್ಥಕ ಪದ್ಯದಲ್ಲಿ ನೀವು ಮೆಚ್ಚುವ ಅಂಶಗಳಾವುವು?

**IV. ಈ ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x2=4**

13. ಕೆ.ಎಸ್. ನರಸಿಂಹಸ್ವಾಮಿ
14. ಚೆನ್ನವೀರ ಕಣವಿ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2x2=4**

15. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"
16. "ನೈಜತೆಗೆ ಇಲ್ಲ ಬೆಲೆಯು"

**VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x2=2**

17. ಜೈನರಾದ ..............................
..............................
..............................
.............................. ಜನ್ನರ

ಅಥವಾ

ಲಕ್ಷ್ಮೀಪತಿ ..............................
..............................
..............................
.............................. ವಿದ್ಯಾರಣ್ಯರ

(ಪ್ರ.ತಿ.ನೋ)

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1x2=2**

18. ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲುಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ.
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಫಟಿಕ – ಬೆಳದಿಂಗಳು!

**VIII. ಈ ಕೆಳಗಿನ ಪ್ರಶ್ನೆಗಳಿಗೆ 8 ಅಥವಾ 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

19. ಡಿ.ವಿ.ಜಿ. ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

***ಅಥವಾ***

ಡಿ.ವಿ.ಜಿ. ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

**IX. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4 [2+2]**

20. ಒಂದು ದಟ್ಟವಾದ ಕಾಡಿನ ಮರದಲ್ಲಿ ಬಹುಕಾಲದಿಂದ ಒಂದು ಗಿಳಿಯು ವಾಸ ಮಾಡುತ್ತಿತ್ತು. ಆ ಮರ ವಿಷದ ಬಾಣದಿಂದಾಗಿ ಒಣಗಿ ನಿಂತರೂ ಗಿಳಿ ಆ ಮರದ ಪೊಟರೆಯನ್ನು ಬಿಟ್ಟು ಹೋಗಲಿಲ್ಲ. ಅಲ್ಲಿ ಸಂಚರಿಸುತ್ತಿದ್ದ ಇಂದ್ರ ಇದನ್ನು ನೋಡಿದ, ಅವನಿಗೆ ಆಶ್ಚರ್ಯವಾಯಿತು. ಗಿಳಿಯನ್ನು ಕರೆದು ಇಂತಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ? ಎಂದು ಕೇಳಿದ. ಆ ಮಾತಿಗೆ ಗಿಳಿ ಹೀಗೆ ಹೇಳಿತು : "ಹಲವು ವರ್ಷಗಳಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲೇ? ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬರುತ್ತೇನೆ. ಆದರೆ ವಾಸ ಮಾತ್ರ ಇಲ್ಲೇ" ಎಂದು ಇಂದ್ರನಿಗೆ ಹೇಳಿತು.

**ಪ್ರಶ್ನೆಗಳು**

ಅ) ಇಂದ್ರನು ಗಿಳಿಯನ್ನು ಏನೆಂದು ಕೇಳಿದ ?

ಆ) ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

**X. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ.** **1x4=4**

21. ನಿಮ್ಮನ್ನು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆ ಕಿರಂಗೂರಿನ ವಿದ್ಯಾರ್ಥಿ ಅನುಶ್ರೀ / ರಮೇಶ್ ಎಂದು ಭಾವಿಸಿಕೊಂಡು ಬರಪರಿಹಾರವನ್ನು ದೊರಕಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

***ಅಥವಾ***

'ರಾಷ್ಟ್ರೀಯ ಹಬ್ಬಗಳು' ಎಂಬ ವಿಷಯವನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.